ಇದಕ್ಕಿಂತ ಇನ್ನೇನು ಹೇಳಬೇಕು. ಒಂದು ಜಿಲ್ಲೆಗೆ ಒಂದು ರೀತಿ ಇನ್ನೊಂದು ಜಿಲ್ಲೆಗೆ ಒಂದು ರೀತಿ. ಅದೇ ಜಿಲ್ಲೆಯಲ್ಲಿ ಒಂದು ಕ್ಷೇತ್ರಕ್ಕೆ ಒಂದು ರೀತಿ ಇನ್ನೊಂದು ಕ್ಷೇತ್ರಕ್ಕೆ ಒಂದು ರೀತಿ. ಈ ರೀತಿ ಕೃತ್ಯಗಳೆಲ್ಲ ನಡೆಯುತ್ತಿದ್ದರೆ ನಾವು ಶಾಸಕರುಗಳಾಗಿ ಇರುವುದಕ್ಕೆ ಆಗುತ್ತದೆಯೇ? ನಾವು ಕೆಲಸ ಮಾಡುವುದಕ್ಕೆ ಸಾಧ್ಯತೆ ಇದೆಯೇ? ಬೇರೆ ಕ್ಷೇತ್ರಗಳಲ್ಲಿ ಕಾರ್ಯಕ್ರಮಗಳನ್ನು ಮಾಡಿದಾಗ ಬೇರೆ ಪಕ್ಷದಶಾಸಕರು ಇದ್ದರೆ ಅವರ ಹೆಸರುಗಳನ್ನು ಆಹ್ವಾನಪತ್ರಿಕೆಗಳಲ್ಲಿ ಹಾಕಿಸುವುದಿಲ್ಲ. ಅವರ ಬಗ್ಗೆ ಬೇರೆ ರೀತಿಯಲ್ಲಿ ಟೀಕೆಗಳನ್ನು ಮಾಡತಕ್ಕದ್ದನ್ನು ಮಾಡುತ್ತಾರೆ. ಇದನ್ನು ಸರ್ಕಾರ ತೀವ್ರವಾಗಿ ಪರಗಣಿಸದೇ ಹೋದರೆ ನಮ್ಮಗಳಿಗೆ ರಕ್ಷಣೆ ಸಿಗುವುದಿಲ್ಲವೆಂದು ನಾನೂ ಸಹ ಸಭಾತ್ಯಾಗವನ್ನು ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಬಿ. ಶಿವರಾಮರವರು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು : ಈ ವಿಷಯದ ಬಗ್ಗೆ ನಾಳೆ ಸಂಬಂಧಪಟ್ಟ ಸಚಿವರು ಉತ್ತರ ಕೊಡಬೇಕು.

ಶ್ರೀ ವೈಜನಾಥ್ ಪಾಟೀಲರು : ಅದೆರ ಬಗ್ಗೆ ರಿಪೋರ್ಟ್ ತರಿಸಿಕೊಂಡು ನಾನುಉತ್ತರ ಕೊಡುತ್ತೇನೆ.

ಗಮನ ಸೆಳೆಯುವ ಸೂಚನೆಗಳು

ಉಪಾಧ್ಯಕ್ಷರು : ಈಗ ಶೂನ್ಯವೇಳೆ ಮುಗಿಯಿತು. ಇನ್ನು ಗಮನ ಸೆಳೆಯುವ ಸೂಚನೆಗಳು.

ಸ್ನಾತಕೋತ್ತರ ಪದವಿಗಳಾದ ಎಂ.ಡಿ. ಎಂ.ಎಸ್. ಹಾಗೂ ಡಿಪ್ಲೋಮ ಕೋರ್ಸುಗಳ ಪ್ರವೇಶದಲ್ಲಿ ಆಕ್ರಮ.

ಶ್ರೀ ಎ. ರಾಮದಾಸ್ : ಸನ್ಮಾನ್ಯ ಉಪಾಧ್ಯಕ್ಷರೆ, ವೈದ್ಯಕೀಯ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಗಳಾದ ಎಂ.ಡಿ. ಎಂ.ಎಸ್. ಹಾಗೂ ಡಿಪ್ಲೋಮಾ ಇವುಗಳ ಪ್ರವೇಶದಲ್ಲಿ ಅಕ್ರಮವಾಗಿರುವ ಬಗ್ಗೆ ಹಾಗೂ ಈ ಅಕ್ರಮದಿಂದ ಸರ್ಕಾರದ ಎಲ್ಲ ಹಂತಗಳಲ್ಲೂ ಕೂಡ ಕೋಟ್ಯಾಂತರ ರೂಪಾಯಿಗಳ ಹಸ್ತಾಂತರ ಆಗಿರುವುದರ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಇಚ್ಛಿಪಡುತ್ತೇನೆ.

+ಶ್ರೀ ಎ. ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯಮಂತ್ರಿ) : ಸನ್ಮಾನ್ಯ ಉಪಾಧ್ಯಕ್ಷರೇ, ಗೌರವಾನ್ವಿತ ಸದಸ್ಯರು ಏನು ಆಪಾದನೆ ಮಾಡಿದ್ದಾರೆ, ಅದು ಸುಳ್ಳು ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಅವರು ಬೇಕಾದರೆ ನಿರ್ದಿಷ್ಟವಾದ ಯಾವುದಾದರೂ ಒಂದು ಉದಾಹರಣೆಯನ್ನು ಹೇಳಲಿ.

ಉಪಾಧ್ಯಕ್ಷರು : ಮೊದಲು ನೀವು ಸ್ಟೇಟಮೆಂಟ್ ಮಾಡಿ.

ಶ್ರೀ ಎ.ಬಿ. ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ನನ್ನ ಹೇಳಿಕೆಯನ್ನು ಓದಲು ತಮ್ಮ ಅಪ್ಪಣೆ ಕೇಳುತ್ತೇನೆ.

1994-95ನೇ ಸಾಲಿನಲ್ಲಿ ಸ್ನಾತಕೋತ್ತರ ಪದವಿ ಮತ್ತು ಡಿಪ್ಲೋಮಾ ಸೀಟುಗಳು, ಸರ್ಕಾರಿ

ಹಾಗೂ ಖಾಸಗಿ ಕಾಲೇಜುಗಳಲ್ಲಿರುವ ಸೀಟುಗಳ ವಿವರ ಈ ಕೆಳಗಿನಂತೆ ಇರುತ್ತದೆ.

	ಸರ್ಕಾರಿ ಕಾಲೇಜು	ಖಾಸಗಿ ಕಾಲೇಜು
ಸ್ನಾತಕೋತ್ತರ ಪದವಿ (ಡಿಗ್ರಿ)	359	541
ಡಿಪ್ಲೋಮಾ	376	402

ಖಾಸಗಿ ಕಾಲೇಜುಗಳವರು ಸರ್ಕಾರಿ ಆಸ್ಪತ್ರೆಗಳಿಂದ ಕ್ಲಿನಿಕಲ್ ಸೌಲಭ್ಯವನ್ನು ಪಡೆಯುತ್ತಿದ್ದು, ಅದರಲ್ಲಿ ಲಭ್ಯವಿರುವ ಪಿ.ಜಿ. ಸೀಟುಗಳಿಗೆ ಶೇಕಡ 20 ರಿಂದ 25ರಷ್ಟು ಸೀಟುಗಳನ್ನು ಸರ್ಕಾರದ ಸೀಟುಗಳೆಂದು ಪರಿಗಣಿಸಿದೆ. ಸರ್ಕಾರಿ ಕಾಲೇಜುಗಳಲ್ಲಿರುವ ಸೀಟುಗಳು ಖಾಸಗಿ ಕಾಲೇಜುಗಳಿಂದ ತೆಗೆದುಕೊಂಡ ಸೀಟುಗಳನ್ನು ಈ ಕೆಳಕಂಡಂತೆ ಹಂಚಿಕೆ ಮಾಡಿರುತ್ತದೆ.

		ಆಲ್ ಇಂಡಿಯಾ ಕೋಟಾ	ಸ್ಟೇಟ್ ಎಂಟ್ರೆನ್ಸ್	ಇನ್‌ಸರ್ವೀಸ್
1)	ಡಿಗ್ರಿ	63	286	121
2)	ಡಿಪ್ಲೋಮಾ	69	266	127
	ಒಟ್ಟು	132	552	248

ಆಲ್ ಇಂಡಿಯಾ ಕೋಟಾ : ಆಲ್ ಇಂಡಿಯಾ ಕೋಟಾಗೆ ಸೇರಿದ ಸೀಟುಗಳನ್ನು ಕೇಂದ್ರ ಸರ್ಕಾರದಿಂದ ಡೈರೆಕ್ಟರ್ ಜನರಲ್ ಹೆಲ್ತ್ ಸರ್ವೀಸ್ ಅವರು ಆಯ್ಕೆ ಮಾಡಿ ನಿಯೋಜಿಸುತ್ತಾರೆ.

ಸ್ಟೇಟ್ ಎಂಟ್ರೆನ್ಸ್ : ರಾಜ್ಯ ಪ್ರವೇಶ ಪರೀಕ್ಷೆ ನಡೆಸಿ ಅರ್ಹತೆಯ ಮೇಲೆ ಅರ್ಜಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತಿದೆ. ಕಳೆದ ವರ್ಷ ಈ ಆಯ್ಕೆಯನ್ನು ಸ್ಥಳದಲ್ಲಿಯೇ ಕೌನ್ಸಿಲಿಂಗ್ ಮಾಡಿ ಆಯ್ಕೆ ಮಾಡಲಾಗಿದೆ. ಈ ಆಯ್ಕೆಯನ್ನು ಈ ಕೆಳಗಿನ ಆಯ್ಕೆ ಸಮಿತಿಯ ಮಾಡಿದೆ.

ಸಾಮಾನ್ಯ ಪರೀಕ್ಷೆ ಅಭ್ಯರ್ಥಿಗಳಿಗಾಗಿ

1)	ನಿರ್ದೇಶಕರು, ವೈದ್ಯಕೀಯ ಶಿಕ್ಷಣ	:	ಅಧ್ಯಕ್ಷರು
2)	ಜಂಟಿ ನಿರ್ದೇಶಕರು, ವೈದ್ಯಕೀಯ ಶಿಕ್ಷಣ	:	ಸದಸ್ಯರು
3)	ಪ್ರಾಂಶುಪಾಲರು, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು	:	ಸದಸ್ಯರು
4)	ಉಪನಿರ್ದೇಶಕರು, ವೈದ್ಯಕೀಯ ಶಿಕ್ಷಣ	:	ಸದಸ್ಯರು